ದಿನಾಂಕ 19.11.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ. ಬಿ.ಆರ್.ಡಿ ವಕೀಲರಿಂದಃ**

1) ನಾನು ಈ ಪ್ರಕರಣದಲ್ಲಿ ಅರ್ಜಿದಾರನಿದ್ದು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ, ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿರುತ್ತೆ ಮತ್ತು ಪ್ರಮಾಣ ಪತ್ರದಲ್ಲಿ ಕಂಡುಬರುವ ಸಹಿ ನನ್ನದಿರುತ್ತದೆ.

2) ಪೊಲೀಸರು ಮೊ.ಸಂ.154/2023 ರಲ್ಲಿ ತಯಾರಿಸಿರುವ ಪ್ರ.ವ.ವ ಮತ್ತು ದೂರಿನ ದೃಢೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು **ನಿಪಿ1** ಮತ್ತು **2** ಎಂದು, ಸಿಸಿ ನಂ.7355/2023 ರ ಆದೇಶ ಪುಟಗಳನ್ನು ಹಾಜರುಪಡಿಸಿದ್ದು ಅದನ್ನು **ನಿಪಿ3** ಎಂದು, ಮೊ.ಸಂ.154/2023 ರಲ್ಲಿ ಪೋಲಿಸರು ಸಲ್ಲಿಸಿರುವ ದೋಷಾರೋಪಣಾ ಪಟ್ಟಿಯ ಧೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು **ನಿಪಿ4** ಎಂದು ಗುರುತಿಸಲಾಯಿತು. ವಾಹನ ಅಮಾನತ್ತು ಮತ್ತು ಪಂಚನಾಮೆಯ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು **ನಿಪಿ5** ಎಂದು, ಸ್ಥಳ ಮಹಜರ್ ನ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು **ನಿಪಿ6** ಎಂದು, ಸಿಲಿಕಾನ್ ಸಿಟಿ ಅಸ್ಪತ್ರೆಯವರು ಪೋಲೀಸರು ಅಪಘಾತ ಬಗ್ಗೆ ನೀಡಿದ ಎರಡು ಮೆಮೋಗಳ ದೃಡೀಕೃತ ನಕಲುಗಳನ್ನು ಹಾಜರು ಮಾಡಿದ್ದು ಅವುಗಳನ್ನು ನಿಪಿ7 ಮತ್ತು 8 ಎಂದು, ಬೇಬಿ ಲೇಪನಾಶ್ರೀ ಮತ್ತು ಯೋಗೀಶರವರ ಗಾಯದ ಪ್ರಮಾಣ ಪತ್ರಗಳನ್ನು ಹಾಜರು ಮಾಡಿದ್ದು ಅವುಗಳನ್ನು ನಿಪಿ9 ಮತ್ತು 10 ಎಂದು, ಮೃತ ಯೋಜೀತಾ ರವರ ಶವ ತನಿಖಾ ವರದಿಯ ದೃಡೀಕೃತ ನಕಲನ್ನು ಹಾಜರು ಮಾಡಿದ್ದು ಅದನ್ನು ನಿಪಿ11 ಎಂದು ಗುರುತಿಸಲಾಯಿತು.

ಮೃತ ಯೋಜೀತಾ ರವರ ಶವ ಪರೀಕ್ಷಾ ವರದಿಯ ದೃಡೀಕೃತ ನಕಲನ್ನು ಹಾಜರು ಮಾಡಿದ್ದು ಅದನ್ನು ನಿಪಿ12 ಎಂದು, ಐಎಂವಿ ವರದಿಯ ದೃಡೀಕೃತ ನಕಲನ್ನು ಹಾಜರು ಮಾಡಿದ್ದು ಅದನ್ನು ನಿಪಿ13 ಎಂದು, ಪೋಲೀಸರು ವಾಹನದ ಮಾಲೀಕರಿಗೆ ನೀಡಿದ ನೋಟಿಸಿನ ದೃಡೀಕೃತ ನಕಲನ್ನು ಹಾಜರು ಮಾಡಿದ್ದು ಅದನ್ನು ನಿಪಿ14 ಎಂದು, ವಾಹನದ ಮಾಲೀಕರು ಪೋಲೀಸರಿಗೆ ನೀಡಿದ ನೋಟಿಸಿನ ಉತ್ತರದ ದೃಡೀಕೃತ ನಕಲನ್ನು ಹಾಜರು ಮಾಡಿದ್ದು ಅದನ್ನು ನಿಪಿ15 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಎದುರುದಾರರು ಗೈರು ಹಾಜರರಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಗೆ ವಕೀಲರು ಸಮಯ ಕೋರಿದ್ದರಿಂದ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ**

**ಹಿರಿಯ ಸಿವಿಲ್ ನ್ಯಾಯಾಧೀಶರು
ಹಾಗೂ ಜೆಎಂಎಫ್‌ಸಿ, ಚಿಂತಾಮಣಿ.**